**ಪಿ. ಸಿ. ಆರ್. ನಂಬರಃ 314/2026**
**ಪಿ. ಡಬ್ಲ್ಯೂಃ 1**

**ಮುಂದುವರಿದ ಮುಖ್ಯವಿಚಾರಣೆಃ ದಿನಾಂಕಃ 23.07.2026**

ದಿಃ 14.04.2021 ರಂದು ನಮ್ಮ ಫಿರ್ಯಾದುದಾರ ಸಂಘದ ನೋಂದಣಿ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ನಿಪಿ-7 ಎಂದು, ದಿಃ 10.07.2022 ರ ವೈಯಕ್ತಿಕ ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ನಿಪಿ-8 ಎಂದು, ದಿಃ 17.07.2023 ರ ಸ್ವೀಕೃತಿ ಪಾವತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ದಿಃ 17.07.2023 ರ ಸಾಲದ ಕರಾರು ಪತ್ರವನ್ನು ಹಾಜರುಪಡಿಸಿದ್ದು ನಿಪಿ-10 ಎಂದು, ದಿಃ 17.07.2023 ರ ಡಿಮಾಂಡ್ ಪ್ರಾಮಿಸರಿ ನೋಟ್ ನ್ನು ಹಾಜರುಪಡಿಸಿದ್ದು ನಿಪಿ-11 ಎಂದು, ಅಕೌಂಟ್ ಎಸ್ಕಟ್ರ್ಯಾಕ್ಟ್ ನ್ನು ಹಾಜರುಪಡಿಸಿದ್ದು ನಿಪಿ-12 ಎಂದು ಗುರುತಿಸಲಾಯಿತು.

(ನಿಪಿ 8 ರಿಂದ 10 ರವರೆಗಿನ ದಾಖಲೆಯನ್ನು ಮೂಲದಾಖಲೆಗಳೊಂದಿಗೆ ತಾಳೆನೋಡಿ, ಅವಶ್ಯವಿದ್ದಲ್ಲಿ ಸದ್ರಿ ದಾಖಲೆಗಳನ್ನು ಹಾಜರುಪಡಿಸಬೇಕೆಂಬ ನಿರ್ದೇಶನದ ಮೇರೆಗೆ, ಮೂಲದಾಖಲೆಗಳನ್ನು ಫಿರ್ಯಾದುದಾರರಿಗೆ ವಾಪಸ್ಸು ನೀಡಲಾಯಿತು.)

ಆದುದರಿಂದ ಆರೋಪಿಯ ವಿರುದ್ಧ ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರೀತ್ಯಾಪ್ರಕರಣ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ಆರೋಪಿಯನ್ನು ಕರೆಸಿ ವಿಚಾರಣೆ ಮೂಲಕ ಶಿಕ್ಷೆ ವಿಧಿಸಿ, ಪರಿಹಾರ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

**ಸಾಕ್ಷಿ ಹೇಳಿಕೆಯನ್ನು ನನ್ನ ಉಖ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿರುತ್ತಾರೆ**

**Sd/-**

**ಸಾಕ್ಷಿಯ ಸಹಿ** **ಹೆಚ್ಚುವರಿ ನ್ಯಾ.ದಂ., ಭಟ್ಕಳ.**